ಓಎಸ್ 125/2014

ಡಿಡಬ್ಲ್ಯೂ2

**ಸಾಕ್ಷಿಯು ದಿಃ 15.06.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿಗಳ ಪರ ವಕೀಲರಿಂದ**

ನಿಡಿ 55 ಪಹಣಿಯ ಪ್ರಕಾರ ಅದರಲ್ಲಿ ನಮೂದಿಸಿರುವ ಆಸ್ತಿ ಪುಟ್ಟಮಾದಪ್ಪ ರವರ ಹೆಸರಿನಲ್ಲಿ ಇದೆ. ನನ್ನ ತಂದೆಯ ಹೆಸರು ಸುಬ್ಬಪ್ಪ ಮತ್ತು ನನ್ನ ತಂದೆಯ ತಂದೆ ಹೆಸರು ಸುಬ್ಬಪ್ಪ ಎಂದರೆ ಸರಿ. ನನ್ನ ತಾತ ಸುಬ್ಬಪ್ಪ ರವರ ತಂದೆಯ ಹೆಸರು ಬಸಪ್ಪ ಎಂದರೆ ಸರಿ. ಸದರಿ ಬಸಪ್ಪ ರವರಿಗೆ ಇಬ್ಬರೂ ಮಕ್ಕಳು, ಅವರುಗಳೆಂದರೆ ಸುಬ್ಬಪ್ಪ ಮತ್ತು ಪುಟ್ಟಮಾದಪ್ಪ ಆಗಿರುತ್ತಾರೆ ಎಂದರೆ ಸರಿ. ಸದರಿ ಸುಬ್ಬಪ್ಪ ಮತ್ತು ಪುಟ್ಟಮಾದಪ್ಪ ರವರು ತಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಪುಟ್ಟಮಾದಪ್ಪ ರವರು ಮದುವೆಯಾಗದೇ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಪುಟ್ಟಮಾದಪ್ಪ ರವರಿಗೆ ವಾದಿಗಳು ಮತ್ತು ಪ್ರತಿವಾದಿಗಳಾದ ನಾವುಗಳೇ ವಾರಸುದಾರರು ಎಂದರೆ ಸರಿ. ಪುಟ್ಟಮಾದಪ್ಪ ರವರು ಮೃತಪಟ್ಟ ನಂತರ ಅವರ ಆಸ್ತಿಗಳು ನಮ್ಮ ಹೆಸರಿಗೆ ಖಾತೆಯಾಗಿವೆ ಎಂದರೆ ಸರಿ. ಪುಟ್ಟಮಾದಪ್ಪ ರವರು ತಮ್ಮ ಭಾಗದ ಆಸ್ತಿಯನ್ನು ನಿಮಗಾಗಲಿ, ನಿಮ್ಮ ತಂದೆಗಾಗಲಿ ನೋಂದಾಯಿತ ದಾಖಲೆ ಮೂಲಕ ಬರೆದುಕೊಟ್ಟಿದ್ದಾರ ಎಂದರೆ ಸಾಕ್ಷಿಯು ಬರೆದು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಯಾವ ಪತ್ರದ ಮೂಲಕ ಪುಟ್ಟಮಾದಪ್ಪ ರವರು ಆಸ್ತಿಯನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ದಾನಪತ್ರದ ಮೂಲಕ ನೀಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಸದರಿ ದಾನಪತ್ರವನ್ನು ಪುಟ್ಟಮಾದಪ್ಪ ರವರು ನನ್ನ ತಂದೆ ಸುಬ್ಬಪ್ಪ ರವರ ಹೆಸರಿಗೆ ಬರೆದು ಕೊಟ್ಟಿದ್ದಾರೆ. ಸದರಿ ದಾನಪತ್ರದ ದಿನಾಂಕ ನನಗೆ ಗೊತ್ತಿಲ್ಲ. ಪುಟ್ಟಮಾದಪ್ಪ ರವರು ನನ್ನ ತಂದೆ ಸುಬ್ಬಪ್ಪ ರವರಿಗೆ ಯಾವುದೇ ರೀತಿಯ ದಾನಪತ್ರದ ಮೂಲಕ ಆಸ್ತಿಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಓಎಸ್ 125/2014

ಡಿಡಬ್ಲ್ಯೂ2

2. ಪುಟ್ಟಮಾದಪ್ಪ ರವರಿಗೆ ದಾವ ಐಟಂ ನಂಃ 2 ನೇ ಸ್ವತ್ತನ್ನು ನನ್ನ ತಂದೆಯು ವಾದಿಗಳ ತಂದೆಗೆ ಮತ್ತು ಉಳಿದ ಪ್ರತಿವಾದಿಗಳಿಗೆ ತಿಳಿಯದ ಹಾಗೆ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಕೊಂಗಳಪ್ಪ ರವರು ತಮ್ಮ ಜೀವಿತಾವಧಿಯಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ಮಾಡಿಕೊಂಡಿದ್ದಾರೆ ಎಂದರೆ ಸರಿ. ದಾವ ಐಟಂ ನಂಃ 4 ರಿಂದ 6ನ್ನು ನನ್ನ ತಾತ ಸುಬ್ಬಪ್ಪ ರವರಿಗಿದ್ದ ಒಟ್ಟು ಕುಟುಂಬದ ಅಸ್ತಿಗಳ ಆದಾಯದಿಂದಲೇ ಕೊಂಗಳಪ್ಪ ರವರು ಖರೀದಿ ಮಾಡಿದ್ದಾರ ಎಂದರೆ ಸರಿ. ದಾವ ಐಟಂ ನಂಃ 4 ರಿಂದ 6 ಗಳ ಸ್ವತ್ತುಗಳಲ್ಲಿ ವಾದಿಗಳಿಗೆ ಮತ್ತು ಇತರೆ ಪ್ರತಿವಾದಿಗಳಿಗೂ ಸಹ ಹಕ್ಕು ಇದೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ವಾದಿಗಳ ತಂದೆ ಮತ್ತು ನಮ್ಮ ತಂದೆಯ ನಡುವೆ ಯಾವುದೇ ವಿಭಾಗವಾಗಿಲ್ಲ ಎಂದರೆ ಸರಿ. ವಾದಿಗಳಿಗೆ ಎಲ್ಲ ದಾವ ಆಸ್ತಿಗಳಲ್ಲೂ ಭಾಗಾಂಶದ ಹಕ್ಕು ಇದ್ದರೂ ಸಹ ದಾವ ಐಟಂ ನಂಃ 2ನೇ ಸ್ವತ್ತು ಚಿನ್ನಮ್ಮ ರವರಿಗೆ ಸೇರಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 53 ವಂಶವೃಕ್ಷದ ಪ್ರಮಾಣ ಪತ್ರ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ದಾವ ಐಟಂ ನಂಃ 2ನೇ ಸ್ವತ್ತನ್ನು ಕಬಳಿಸುವ ಸಲುವಾಗಿ, ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ